ಕರ್ನಾಟಕ ಸರ್ಕಾರ

Phon No.:08282 266355
FAX No.08282 266647
E mail: dcfbdvt@yahoo.in

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಭದ್ರಾವತಿ ವಿಭಾಗ, ಭದ್ರಾವತಿ. – 577301

ಸಂಖ್ಯೆ:ಬಿ2.ಭೂ.ಮಿ.ಸಿ.ಆರ್.ಸಿ.-4997 /2019-20. ದಿನಾಂಕ:10-10-2019.

ಇವರಿಗೆ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಶಿವಮೊಗ್ಗ ವೃತ್ತ, ಶಿವಮೊಗ್ಗ.

ಮಾನ್ಯರೇ.

ವಿಷಯ : Diversion of 93.07 hectare of forest land Tevaraghatta Sy.No.14 in 29.87 Ha., Singanamane Sy.No.16 in 33.29 Ha., Byrapura Sy.No.86 in 19.7 Ha. and Byrapura Sy.No.92 in 10.22 Ha. Total 93.07 Ha. Shimoga District for **Development of University Campus for academic activities, Kuvempu University Campus** Scheme in favour of Kuvempu University, Jnanashyadri, Shankaraghatta. (Proposal No.FP.KA/SCH/35132/2018).

ಉಲ್ಲೇಖ
1. ಎಫ್.ಸಿ. ಪ್ರಪೋಸಲ್ ನಂ. FP.KA/SCH/35132/2018.
2. ಈ ಕಛೇರಿ ಪತ್ರ ಸಂಖ್ಯೆ:ಬಿ2.ಭೂಮಿ.ಸಿಆರ್– /2019–20 ದಿನಾಂಕ:04–07–2019.
3. ವಲಯ ಅರಣ್ಯಾಧಿಕಾರಿ, ಉಂಬ್ಳೇಬೈಲು ವಲಯ, ಉಂಬ್ಳೇಬೈಲು ಇವರ ಕಛೇರಿ ಪತ್ರ ಸಂ:350/2019–20 ದಿನಾಂಕ:17–09–2019.
4. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ ಇವರ ಕಛೇರಿ ಪತ್ರ ಸಂ:ಎಸಿಎಫ್.ಚೆನ್ನ.ಉವಿ.ವಿವ/ 2019–20 ದಿನಾಂಕ:10–10–2019.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಜಿಲ್ಲೆಯ, ತ್ಯಾವರಘಟ್ಟ ಸ.ನಂ.14 ರ 29.87 ಹೆ., ಸಿಂಗನಮನೆ ಸ.ನಂ.16 ರ 33.29 ಹೆ., ಭೈರಾಪುರ ಸ.ನಂ.86 ರ 19.7 ಹೆ. ಮತ್ತು ಭೈರಾಪುರ ಸ.ನಂ.92 ರ 10.22 ಹೆ. ಒಟ್ಟು 93.08 ರಲ್ಲಿ **Development of University Campus for academic activities, Kuvempu University Campus** ನ್ನು ಸ್ಥಾಪಿಸಲು ಉಪಯೋಗಿ ಸಂಸ್ಥೆಯವರಾದ Kuvempu University, Jnanashyadri, Shankaraghatta ಇವರು ಉಲ್ಲೇಖ ಪತ್ರದಲ್ಲಿ ಆನ್ ಲೈನ್ ಮುಖಾಂತರ ಉಲ್ಲೇಖ (1)ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಆನ್ ಲೈನ್ ಪ್ರಸ್ತಾವನೆಯ ಅರ್ಜಿಯಲ್ಲಿ ಕೋರಿರುವ ಸ್ಥಳದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸದರಿ ಪ್ರದೇಶದಲ್ಲಿ ಉಪಯೋಗಿ ಸಂಸ್ಥೆಯವರಿಗೆ ಅನುಮತಿಯನ್ನು ನೀಡುವ ವಿಚಾರದಲ್ಲಿ ವಿವರವಾದ ವರದಿಯನ್ನು ಸಲ್ಲಿಸಲು ಉಲ್ಲೇಖ (2)ರಲ್ಲಿ ಪತ್ರದಲ್ಲಿ ವಲಯ ಅರಣ್ಯಾಧಿಕಾರಿ, ಉಂಬ್ಳೇಬೈಲು ವಲಯ, ಉಂಬ್ಳೇಬೈಲು ಇವರಿಗೆ ಸೂಚಿಸಲಾಗಿತ್ತು.



Scanned with CamScanner

ಉಲ್ಲೇಖ (3) ಮತ್ತು (4)ರಲ್ಲಿ ವಲಯ ಅರಣ್ಯಾಧಿಕಾರಿ, ಉಂಬ್ಳೇಬೈಲು ವಲಯ, ಉಂಬ್ಳೇಬೈಲು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ ಇವರು ಈ ಕೆಳಕಂಡಂತೆ ವರದಿಯನ್ನು ಒಪ್ಪಿಸಿರುತ್ತಾರೆ.

ಮುಂದುವರೆದು, ಶಿವಮೊಗ್ಗ ಜಿಲ್ಲೆಯ, ಭೈರಾಪುರದ ಸರ್ವೆ ನಂ.86 ಮತ್ತು ಸರ್ವೆ ನಂ.92 ರ ಪ್ರದೇಶವು ಉಂಬ್ಳೇಬೈಲು ಪ್ರಾದೇಶಿಕ ವಲಯದ ವ್ಯಾಪ್ತಿಗೆ ಬರುವುದಿಲ್ಲ. ದಿನಾಂಕ:01-04-2014 ರ ಮರು ವಿಂಗಡಣೆ ನಂತರ ತಾವರಘಟ್ಟ ಸರ್ವೆ ನಂ.14 ಮತ್ತು ಸಿಂಗನಮನೆ ಸ.ನಂ.16 ಈ ಎರಡು ಸರ್ವೆ ನಂಬರ್‌ಗಳು ಉಂಬ್ಳೇಬೈಲು ಪ್ರಾದೇಶಿಕ ವಲಯದ ವ್ಯಾಪ್ತಿಗೆ ಒಳಪಡುವುದಿಲ್ಲ ಮತ್ತು ಸದರಿ ಸರ್ವೆ ನಂಬರ್‌ಗಳು ಭದ್ರಾವನ್ಯಜೀವಿ ವಿಭಾಗದ ವ್ಯಾಪ್ತಿಗೆ ಒಳಪಡುವುದಾಗಿ ಉಂಬ್ಳೇಬೈಲು ವಲಯ ಅರಣ್ಯಾಧಿಕಾರಿ ತಿಳಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ). ಇವರು ಸಲ್ಲಿಸಿದ ವರದಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ ಇವರು ಅನುಮೋದಿಸಿದ್ದು ಎಫ್.ಸಿ. ಪ್ರಸ್ತಾವನೆಯು ಈ ವಿಭಾಗದ ವ್ಯಾಪ್ತಿಗೆ ಬರುವುದಿಲ್ಲವೆಂಬ ವರದಿಯನ್ನು ಮತ್ತು ಸದರಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ Forest clearance web portal ನಲ್ಲಿ ವಿವರವನ್ನು ಭರ್ತಿ ಮಾಡಿ ಆನ್ ಲೈನ್ ಮುಖಾಂತರ ಸಲ್ಲಿಸಿದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ಒಪ್ಪಿಸಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಭದ್ರಾವತಿ ವಿಭಾಗ, ಭದ್ರಾವತಿ.

1) ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ ಇವರ ಮಾಹಿತಿಗಾಗಿ ಕಳುಹಿಸಿದೆ.
2) ಪ್ರತಿಯನ್ನು ವಲಯ ಅರಣ್ಯಾಧಿಕಾರಿ, ಉಂಬ್ಳೇಬೈಲು ವಲಯ, ಉಂಬ್ಳೇಬೈಲು ಇವರ ಮಾಹಿತಿಗಾಗಿ ಕಳುಹಿಸಿದೆ.

Scanned with CamScanner